ಇ), 1993–94ನೇ ಆಯವ್ಯಯದಲ್ಲಿ ಸದರಿ ಬ್ಯಾರೇಜ್ ನಿರ್ಮಾಣಕ್ಕಾಗಿ ಗುರುತಿಸಲಾದ ಹಾಗೂ ಬಿಡುಗಡೆ ಮಾಡಲಾದ ಹಣವೆಷ್ಟು ?

ಡಾ.. ಆರ್.ಬಿ. ಚೌಧರಿ (ಸಣ್ಣ ನೀರಾವರಿ ರಾಜ್ಯ ಸಚಿವರು):–

ಅ) ಈ ಬಗ್ಗೆ ಎರಡೂ ರಾಜ್ಯಗಳು ಯಾವುದೇ ಹೊಂದಾಣಿಕೆ ಮಾಡಿಕೊಂಡಿರುವುದಿಲ್ಲ ಮತ್ತು ಮಹಾರಾಷ್ಟ್ರ ಸರ್ಕಾರದಿಂದ ಕರ್ನಾಟಕ ಸರ್ಕಾರಕ್ಕೆ ಯಾವ ಪ್ರಸ್ತಾವನೆಯೂ ಬಂದಿರುವುದಿಲ್ಲ. ಆದರೆ ಈ ಬಗ್ಗೆ ಮಹಾರಾಷ್ಟ್ರ ರಾಜ್ಯದ ಶೊಲ್ಲಾಪುರ ಸಣ್ಣ ನೀರಾವರಿ ವಿಭಾಗದ ಕಾರ್ಯನಿರ್ವಾಹಕ ಇಂಜಿನಿಯರ್‌ರವರು ಕರ್ನಾಟಕ ರಾಜ್ಯದ ಸಣ್ಣ ನೀರಾವರಿ ವಿಭಾಗ, ಬಿಜಾಪುರ ಕಾರ್ಯನಿರ್ವಾಹಕ ಇಂಜಿನಿಯರ್‌ರವರಿಗೆ ಪ್ರಸ್ತಾವನೆ ಕಳುಹಿಸಿದ್ದಾರೆ.

ಆ) ತನಿಖೆ ಮಾಡಿರುವ ನಾಲ್ಕು ಬ್ಯಾರೇಜ್‌ಗಳಿಂದ ಬಳ್ಳೊಳ್ಳಿ ಕ್ಷೇತ್ರದ ಸುಮಾರು 2800 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಆಗಬಹುದೆಂದು ಮತ್ತು ಉಳಿದ ನಾಲ್ಕು ಬ್ಯಾರೇಜ್‌ಗಳ ತನಿಖೆ ನಡೆಯುತ್ತಿದೆ ಎಂದು ತಿಳಿದು ಬಂದಿದೆ.

ಇ) ಯಾವುದೂ ಇಲ್ಲ.

ಮಹದಾಯಿ ಪ್ರಾಜೆಕ್ಟ್ ಯೋಜನೆಯನ್ನು ಪ್ರಾರಂಭಿಸುವ ವಿಚಾರ

2231: ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ):– ಮಾನ್ಯ ಉಪ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮಹದಾಯಿ ಯೋಜನೆಯನ್ನು ಪ್ರಾರಂಭಿಸಲು ಆಡಳಿತಾತ್ಮಕ ಮಂಜೂರಾತಿಯನ್ನು ಸರ್ಕಾರದವರು ಕೊಡಲಾಗಿದೆಯೆ. ಹಾಗಿದ್ದಲ್ಲಿ ಎಷ್ಟು ಮೊತ್ತಕ್ಕೆ ಆಡಳಿತಾತ್ಮಕ ಮಂಜೂರಾತಿಯನ್ನು ಕೊಡಲಾಗಿದೆ.

ಆ) ಈ ಯೋಜನೆಗೆ ತಾಂತ್ರಿಕ ಮಂಜೂರಾತಿಯನ್ನು ನೀಡಲಾಗಿದೆಯೇ ಹಾಗಿದ್ದಲ್ಲಿ ತಾಂತ್ರಿಕ ಮಂಜೂರಾತಿಯನ್ನು ಎಂದು ಕೊಡಲಾಯಿತು. ಹಾಗೂ ಇನ್ನು ಎಷ್ಟು ದಿನಗಳಲ್ಲಿ ಈ ಕೆಲಸವನ್ನು ಮಾಡಿ ಮುಗಿಸಲಾಗುವುದು;

ಇ) 1992–93ನೇ ಸಾಲಿನಲ್ಲಿ ಈ ಯೋಜನೆಗೆ ಆಯವ್ಯಯದಲ್ಲಿ ನಿಗದಿಪಡಿಸಲಾದ ಹಣವೆಷ್ಟು ಮತ್ತು ಇಲ್ಲಿಯವರೆಗೆ ಈ ಯೋಜನೆಗೆ ಖರ್ಚು ಆಗಿರುವ ಹಣ ವೆಷ್ಟು;

ಈ) ಈ ಯೋಜನೆಯಿಂದ ಬೆಳಗಾಂ ಜಿಲ್ಲೆಯ ಯಾವ್ಯಾವ ಗ್ರಾಮಗಳಿಗೆ ಎಷ್ಟೆಷ್ಟು ಎಕರೆ ನೀರಾವರಿ ಆಗುವುದು;

ಉ) ಈ ಯೋಜನೆಯ ಕೆಲಸವು ಬಹಳ ಮಂದಗತಿಯಿಂದ ಸಾಗುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ;

ಊ) 1993–94ನೇ ಸಾಲಿನ ಆಯವ್ಯಯ ಪಟ್ಟಿಯಲ್ಲಿ ಈ ಯೋಜನೆಗೆ ಎಷ್ಟು ಹಣವನ್ನು ಒದಗಿಸಲಾಗಿದೆ. ಈ ಯೋಜನೆಗೆ ಇಲ್ಲಿಯವರೆಗೆ ಎಷ್ಟು ಎಲ್.ಓ.ಸಿ. ಬಿಡುಗಡೆ ಮಾಡಲಾಗಿದೆ. ಹಾಗೂ ಅದರಲ್ಲಿ ಖರ್ಚಾಗಿರುವ ಹಣ ವೆಷ್ಟು ?

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯ ಮಂತ್ರಿಗಳು):–

ಅ) ಇಲ್ಲ.

ಆ) ಇಲ್ಲ.

ಇ) ನಿಗದಿ ಮಾಡಿದ ಹಣ : 1.00 ಕೋಟಿ ರೂ.ಗಳು
ಖರ್ಚಾದ ಹಣ : 20.70 ಲಕ್ಷ ರೂ.ಗಳು
(ಪ್ರಸ್ತುತ ವರ್ಷದಲ್ಲಿ 28.2.93 ರವರೆಗೆ)

ಈ) ಈ ಯೋಜನೆಯಿಂದ ಮಲಪ್ರಭಾ ಜಲಾಶಯಕ್ಕೆ ನೀರು ಪೂರೈಕೆ ಮಾಡಲಾಗುವುದೇ ವಿನಃ ಹೊಸದಾಗಿ ನೀರಾವರಿ ಸೌಲಭ್ಯ ಒದಗುವುದಿಲ್ಲ.

ಉ) ಈ ಯೋಜನೆಗೆ ಇನ್ನೂ ಆಡಳಿತಾತ್ಮಕ ಮಂಜೂರಾತಿ ನೀಡಿಲ್ಲವಾದ್ದರಿಂದ, ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಊ) 1993–94ನೇ ಸಾಲಿನಲ್ಲಿ 3.00 ಕೋಟಿ ರೂ.ಗಳನ್ನು ಒದಗಿಸಲಾಗಿದೆ. 1992–93ನೇ ಸಾಲಿನಲ್ಲಿ 28–2–93 ರವರೆಗೆ 21 ಲಕ್ಷ ರೂ.ಗಳ ಎಲ್.ಓ.ಸಿ. ಬಿಡುಗಡೆ ಮಾಡಲಾಗಿದೆ.

ಮಾರ್ಕಂಡೇಯ ಯೋಜನೆ ಪ್ರಾರಂಭಿಸುವ ವಿಚಾರ

2230: ಶ್ರೀ. ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ):– ಮಾನ್ಯ ಉಪ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮಾರ್ಕಂಡೇಯ ಯೋಜನೆಗೆ ಸರ್ಕಾರದವರು ಆಡಳಿತಾತ್ಮಕ ಮತ್ತು ತಾಂತ್ರಿಕ ಮಂಜಾರಾತಿಯನ್ನು ಕೊಟ್ಟಿರುವರೇ;

ಆ) ಹಾಗಿದ್ದಲ್ಲಿ ಈ ಕೆಲಸಕ್ಕೆ ಆಡಳಿತಾತ್ಮಕ ಮತ್ತು ತಾಂತ್ರಿಕ ಮಂಜೂರಾತಿಯನ್ನು ಎಂದು ಕೊಡಲಾಯಿತು ಮತ್ತು ಎಷ್ಟು ಮೊತ್ತಕ್ಕೆ ಕೊಡಲಾಗಿದೆ;

ಇ) ಈ ಕೆಲಸಕ್ಕೆ 1992–93ನೇ ಸಾಲಿನಲ್ಲಿ ಈ ಯೋಜನೆಗೆ ಒದಗಿಸಲಾಗಿರುವ ಹಣವೆಷ್ಟು ಮತ್ತು ಇಲ್ಲಿಯವರೆಗೆ ಎಷ್ಟು ಹಣ ಖರ್ಚಾಗಿದೆ ಮತ್ತು ಈ ಯೋಜನೆಗೆ ಎಷ್ಟು ಹಣ ಎಲ್.ಓ.ಸಿ. ಬಿಡುಗಡೆ ಮಾಡಲಾಗಿರುವ ಹಣವೆಷ್ಟು ಮತ್ತು ಆದರಲ್ಲಿ ಎಲ್.ಓ.ಸಿಯಿಂದ ಖರ್ಚಾಗಿರುವ ಹಣವೆಷ್ಟು;

ಈ) ಈ ಯೋಜನೆಯಿಂದ ಯಾವ್ಯಾವ ತಾಲ್ಲೂಕಿನಲ್ಲಿ ನೀರಾವರಿಯಾಗಿರುವುದು ಹಾಗೂ ಬೈಲಹೊಂಗಲ ಮತ್ತು ಸೌದತ್ತಿ ತಾಲ್ಲೂಕಿನ ಯಾವ್ಯಾವ ? ಗ್ರಾಮಗಳಿಗೆ ಎಷ್ಟೆಷ್ಟು ಎಕರೆ ನೀರಾವರಿ ಆಗುವುದು;

ಉ) ಈ ಯೋಜನೆ ಬಹಳ ಮಂದಗತಿಯಿಂದ ಸಾಗುತ್ತಿರುವ ಸಂಗತಿ ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯ ಮಂತ್ರಿಗಳು):–

ಅ) ಇಲ್ಲ.

ಆ) ಇಲ್ಲ.

ಇ) 50 ಲಕ್ಷರೂ.ಗಳು

ಈ) ಈ ಯೋಜನೆಯಿಂದ ಹುಕ್ಕೇರಿ, ಗೋಕಾಕ್, ಬೆಳಗಾವಿ ಮತ್ತು ಸವದತ್ತಿ ತಾಲ್ಲೂಕುಗಳಲ್ಲಿ